



ಜಗತ್ಪ್ರಸಿದ್ಧ ಜಂಬೂ ಸವಾರಿ ನಡೆಯುವಾಗ ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿ ಒಂದು ಸಣ್ಣ ಗುಂಡಿಯೂ ಉಳಿಯದಂತೆ ದಪ್ಪ ಪದರಿನ ಟಾರು ಹಾಕಿರುತ್ತಾರೆ. 'ಗಜ ಪಯಣ'ಕ್ಕೆ ಯಾವುದೇ ಅಡ್ಡಿ– ಆತಂಕ ಉಂಟಾಗದಂತೆ ತಿಂಗಳುಪರ್ಯಂತ ಭರ್ಜರಿ ತಯಾರಿಗಳು ಸಹ ನಡೆದಿರುತ್ತವೆ. ರಸ್ತೆಗೆ ಜನ ಇಳಿಯದಂತೆ ಬಿದಿರಿನ ತಡೆಗೋಡೆ ಕಟ್ಟಿರುತ್ತಾರೆ. ಆ ರಸ್ತೆಗೆ ದೀಪಾಲಂಕಾರ, ತಳಿರು– ತೋರಣಗಳ ವೈಭೋಗ ಬೇರೆ. ಚಿನ್ನದ ಅಂಬಾರಿ ಹೊತ್ತು ಜನರಿಗೆ ಮುದ ನೀಡುವ ಗಜಪಡೆಗೆ ಅಷ್ಟೊಂದು ರಾಜಮರ್ಯಾದೆ. ಹಾಗಾಗಿಯೇ ಈ ಹಂಗಾಮಿ ಗಜಪಥಕ್ಕೆ ಎಲ್ಲಿಲ್ಲದ ಮಹತ್ವ.

ಇನ್ನು ಇತ್ತ ಬನ್ನಿ. ಅದೇ ಮೈಸೂರು ಪಕ್ಕದ ಬಂಡೀಪುರಕ್ಕೆ; ಅಲ್ಲಿಂದಾಚೆಗಿನ ನೀಲಗಿರಿ ಜೈವಿಕ ವಲಯಕ್ಕೆ. ಬಂಡೀಪುರ, ವಯನಾಡು ಹಾಗೂ ಮದುಮಲೈ ಕಾಡನ್ನು ಒಳಗೊಂಡ ಈ ಜೈವಿಕ ವಲಯವೇ ದಕ್ಷಿಣ ಭಾರತದ ಆನೆಗಳ ಬಹುದೊಡ್ಡ ಆವಾಸಸ್ಥಾನ. ಈ ದಟ್ಟಕಾಡಿನಲ್ಲಿ ಅವುಗಳ ಸ್ವಚ್ಛಂದ ವಿಹಾರಕ್ಕೆ ಈಗ ಹೆಜ್ಜೆ, ಹೆಜ್ಜೆಗೂ ಅಡೆತಡೆ. ವಿಶಾಲ ಅರಣ್ಯ ಪ್ರದೇಶದ ತುಂಬಾ ಗಜಪಥಗಳು ಯರ್ರಾಬಿರ್ರಿ ತುಂಡಾಗಿ 'ಮಿಸ್ಸಿಂಗ್ ಲಿಂಕ್'ಗಳು ಸೃಷ್ಟಿಯಾಗಿವೆ. ಅಲ್ಲೆಲ್ಲ ಮನುಷ್ಯನ ಹೆಜ್ಜೆ ಗುರುತುಗಳು ಮೂಡಿವೆ.

'ಆನೆ ನಡೆದದ್ದೇ ದಾರಿ' ಎಂದು ನಾವೆಲ್ಲ ಹೇಳುವುದು ಉಂಟಲ್ಲವೆ? ದೈತ್ಯದೇಹಿಯಾದ ಈ ಪ್ರಾಣಿ ಎಂತಹ ಅಡೆತಡೆಯನ್ನೂ ನಿವಾರಿಸಿಕೊಂಡು ಮುಂದೆ ಹೋಗಬಲ್ಲುದು. ಅದರ ಆ ಸಾಮರ್ಥ್ಯವನ್ನು ಪ್ರಶಂಸಿಸಲು ಹುಟ್ಟಿಕೊಂಡಿರುವ ಮಾತಿದು. ಆದರೆ, ಈ ಕಾಡಿನಲ್ಲಿ ಸಕ್ರಿಯವಾಗಿರುವ ವನ್ಯಜೀವಿ ತಜ್ಞರನ್ನು ಒಮ್ಮೆ ಮಾತನಾಡಿಸಿ ನೋಡಿ, 'ಆನೆ ನಡೆಯೋಕೆ ಈಗ ಎಲ್ಲಿದೆ ಸ್ವಾಮಿ ದಾರಿ?' ಎಂಬ ಪ್ರಶ್ನೆಯನ್ನು ಅವರು ಹಾಕುತ್ತಾರೆ.

**ಕೇಂದ್ರ ಸರ್ಕಾರದ ಅನುದಾನದಲ್ಲಿ ನಡೆಯುತ್ತಿರುವ 'ಆನೆ ಯೋಜನೆ'ಯು ಅಧಿಕಾರಿಗಳ ಪಾಲಿಗೆ ಹಣ ಹಿಂಡುವ ಹಸುವಾಗಿದೆಯೇ ಹೊರತು ಗಜಪಡೆಗೆ ಅದರಿಂದ ಹೆಚ್ಚೇನೂ ಪ್ರಯೋಜನವಾಗಿಲ್ಲ.**